

ಡಾ. ಎಸ್. ರಾಮಮೂರ್ತಿ

# 11-08-2016ರಿಂದ 17-08-2016ರ ವರೆಗೆ




ವಾರದ ಆರಂಭದಲ್ಲಿ ಕೋಪ ವರ್ತನೆ. ಮಕ್ಕಳಿಂದ ನಿರೀಕ್ಷಿತ ಸಹಾಯ ದೊರೆಯುವುದಿಲ್ಲ. ಆಟಪಾಠಗಳಲ್ಲಿ ನಿರಾಸಕ್ತಿ. ವೃತ್ತಿಯಲ್ಲಿ ಹಿನ್ನಡೆ. ವಾರದ ಮಧ್ಯಭಾಗದಿಂದ ಅನುಕೂಲ. ಗೃಹ ನಿರ್ಮಾಣ ಚಿಂತನೆ. ಉದ್ಯೋಗದಲ್ಲಿ ಸಮಾಧಾನ. ಕ್ರಯವಿಕ್ರಯಗಳಲ್ಲಿ ಲಾಭ. ಪ್ರಯಾಣ ಸೌಖ್ಯ. ಧೈರ್ಯ ಹೆಚ್ಚಿಸುವ ಸಂದೇಶ. ಶುಭದಿನ: 15; ಗಣಪತಿ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಸಂತಸ. ಆಪ್ತರ ಭೇಟಿ. ಕೆಲಸಗಳು ಸಫಲವಾಗುವುವು. ವ್ಯಾಪಾರದಲ್ಲಿ ಲಾಭ. ವಾರದ ಮಧ್ಯಭಾಗದಲ್ಲಿ ಭಯ. ಒತ್ತಡವಾಗುವ ಘಟನೆಗಳು. ಆರೋಗ್ಯ ವ್ಯತ್ಯಯ. ವೃತ್ತಿಯಲ್ಲಿ ಅಶಾಂತಿ. ವಾಹನಗಳಿಂದ ತೊಂದರೆ. ಮೋಸವಾಗುವ ಸಂಭವ. ಹಣದ ಮುಗ್ಗಟ್ಟು. ವಾರಾಂತ್ಯದಲ್ಲಿ ಸುಧಾರಣೆ. ಶುಭದಿನ: 12; ಶಿವ ಮತ್ತು ಪಾರ್ವತಿ ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಅನುಕೂಲ. ಸ್ಥಿರಮನಸ್ಸು. ಹಿರಿಯರಿಂದ ಪ್ರಶಂಸೆ. ಉದ್ಯೋಗದಲ್ಲಿ ಮುನ್ನಡೆ. ಲೇವಾದೇವಿಗಳಲ್ಲಿ ಲಾಭ. ವಿರೋಧಿಗಳು ತಟಸ್ಥರಾಗುವರು. ದೇವತಾಕ್ಷೇತ್ರ ದರ್ಶನ. ಯೋಜನೆ. ಸಂಶೋಧನೆಗಳಲ್ಲಿ ಆಸಕ್ತಿ. ವಾರಾಂತ್ಯದಲ್ಲಿ ಬೇಸರ. ಮಂದಗತಿಯ ಕೆಲಸ ಕಾರ್ಯಗಳು. ವ್ಯವಹಾರಗಳಲ್ಲಿ ನಷ್ಟ. ಶುಭದಿನ: 14; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಕುಟುಂಬ ಸದಸ್ಯರಲ್ಲಿ ಭಿನ್ನಾಭಿಪ್ರಾಯ. ಸೋದರ ವರ್ಗದವರ ಮೇಲೆ ಕೋಪ. ವೃತ್ತಿ ಪ್ರವೃತ್ತಿಗಳಲ್ಲಿ ಏನಾದರೊಂದು ಸಮಸ್ಯೆ. ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಧೈರ್ಯ. ಪ್ರೀತಿಪಾತ್ರರ ಭೇಟಿ. ಕೆಲಸಗಳಲ್ಲಿ ಯಶಸ್ಸು. ಕ್ರಯವಿಕ್ರಯಗಳಲ್ಲಿ ಲಾಭ. ಖರ್ಚು ನಿಯಂತ್ರಣಕ್ಕೆ ಬರುವುದು. ಶುಭದಿನ: 15; ಗಣಪತಿ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಸಣ್ಣಪುಟ್ಟ ಪೆಟ್ಟಾಗುವ ಸಂಭವ. ಆರೋಗ್ಯ ವ್ಯತ್ಯಯ. ಕೆಲಸ ಕಾರ್ಯಗಳಲ್ಲಿ ಅಡಚಣೆ. ಲೇವಾದೇವಿಗಳಲ್ಲಿ ಹಿನ್ನಡೆ. ವಾರದ ಮಧ್ಯಭಾಗದಿಂದ ಚೇತರಿಕೆ ಆತ್ಮಬಲ ಹೆಚ್ಚುವುದು. ವಿರೋಧಿಗಳು ತಟಸ್ಥರಾಗುವರು. ವ್ಯವಹಾರಗಳಲ್ಲಿ ಪ್ರಗತಿ. ಹಿತೈಷಿಗಳಿಂದ ಸಹಾಯ. ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ. ಶುಭದಿನ:  15; ಗಣಪತಿ ಮತ್ತು ಗುರು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಮನಃಶಾಂತಿ. ಹಣ ಉಳಿತಾಯದ ಚಿಂತನೆ.  ಮಕ್ಕಳಿಂದ ಸಹಕಾರ. ವೃತ್ತಿಯಲ್ಲಿ ಸಫಲತೆ. ಪ್ರಯಾಣ ಸೌಖ್ಯ. ವಾರದ ಮಧ್ಯಭಾಗದಲ್ಲಿ ಕೋಪ. ಸೋಮಾರಿತನ. ಅಕಾಲ ಭೋಜನ. ಉದ್ಯೋಗದಲ್ಲಿ ತಪ್ಪುಗಳಾಗುವ ಸಂಭವ. ವ್ಯಾಪಾರದಲ್ಲಿ ಪೈಪೋಟಿಯಿಂದ ಹಾನಿ. ಒತ್ತಡದ ಸುದ್ದಿ. ವಾರಾಂತ್ಯದಲ್ಲಿ ಸಮಾಧಾನ. ಶುಭದಿನ: 12; ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಅಭಿವೃದ್ಧಿ. ನಿರೀಕ್ಷೆಯಂತೆ ಕಾರ್ಯ ಸಿದ್ಧಿ. ಪ್ರೀತಿ ಪಾತ್ರರಿಂದ ಸಹಾಯ. ವ್ಯಾಪಾರ ವಹಿವಾಟುಗಳಲ್ಲಿ ಲಾಭ. ಗುರು ಹಿರಿಯರಿಂದ ಸಲಹೆ. ತಕರಾರುಗಳು ಬಗೆಹರಿಯುವುದು. ಹಿತಸಂದೇಶ. ವಾರಾಂತ್ಯದಲ್ಲಿ ಚಂಚಲತೆ. ಅಧಿಕ ಶ್ರಮ, ಅಕಾಲ ಭೋಜನ. ವಿರೋಧಿಗಳೊಂದಿಗೆ ವಾದ ವಿವಾದ. ಒತ್ತಡ. ಶುಭದಿನ: 14; ದುರ್ಗಾ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ




ಒತ್ತಡವಿಲ್ಲದೆ ಕೆಲಸ ಕಾರ್ಯಗಳು ನಡೆದು ಮನಃಶಾಂತಿ ಹಾಗೂ ಧೈರ್ಯ ಉಂಟಾಗುವುದು. ಕ್ರಯವಿಕ್ರಯ, ಒಪ್ಪಂದ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭ ಪ್ರಾಪ್ತಿ. ಅಧ್ಯಯನದ ಜೊತೆಗೆ ಕಲೆ ಕ್ರೀಡೆಗಳಲ್ಲೂ ಆಸಕ್ತಿ ಹೆಚ್ಚುವುದು. ತಕರಾರುಗಳನ್ನು ಬಗೆಹರಿಸಿಕೊಳ್ಳಲು ಹಿರಿಯರಿಂದ ಸಹಕಾರ ಲಭಿಸುವುದು. ಪತ್ರಾಗಮನ. ಶುಭದಿನ: 15; ಗಣಪತಿ ಮತ್ತು ಶಿವ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಏನಾದರೊಂದು ಸಮಸ್ಯೆ. ಲೆಕ್ಕಪತ್ರಗಳಲ್ಲಿ ತಪ್ಪುಗಳಾಗಬಹುದು. ಹಣದ ವಿಚಾರದಲ್ಲಿ ಕಲಹ ಸಂಭವ. ವೃತ್ತಿ ಪ್ರವೃತ್ತಿಗಳಲ್ಲಿ ಒತ್ತಡ. ವಾರದ ಮಧ್ಯಭಾಗದಿಂದ ಅನುಕೂಲ. ಮಕ್ಕಳು ಹೇಳಿದಂತೆ ನಡೆದುಕೊಳ್ಳುವರು. ಉದ್ಯೋಗದಲ್ಲಿ ಮುನ್ನಡೆ. ಆಪ್ತರ ಭೇಟಿ. ಶುಭಕಾರ್ಯ ಯೋಜನೆ. ಶುಭದಿನ: 15; ದುರ್ಗಾ ಮತ್ತು ಸುಬ್ರಹ್ಮಣ್ಯ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಸಂತಸ. ವಿದ್ವಾಂಸರ ಭೇಟಿ. ಶುಭ ಕಾರ್ಯ ಯೋಜನೆ. ಕೆಲಸ ಕಾರ್ಯಗಳಲ್ಲಿ ಸಫಲತೆ. ಲೇವಾದೇವಿಗಳಲ್ಲಿ ಲಾಭ. ವಾರದ ಮಧ್ಯಭಾಗದಲ್ಲಿ ಅಶಾಂತಿ. ನಿದ್ರಾಹೀನತೆ. ಅಕಾಲ ಭೋಜನ. ಉದ್ಯೋಗದಲ್ಲಿ ಅಸಮಾಧಾನ. ವ್ಯಾಪಾರದಲ್ಲಿ ಹಾನಿ. ಆರೋಗ್ಯ ವ್ಯತ್ಯಯ. ವಾಹನಗಳಿಂದ ತೊಂದರೆ. ಶುಭದಿನ: 12; ಗಣಪತಿ ಮತ್ತು ಲಕ್ಷ್ಮೀ ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಅನುಕೂಲ. ಆಪ್ತರ ಆಗಮನ. ಹಿರಿಯರಿಂದ ಸಲಹೆ. ಉದ್ಯೋಗದಲ್ಲಿ ಮನಃಶಾಂತಿ. ಪ್ರಯಾಣ ಸೌಖ್ಯ. ಕ್ರಯವಿಕ್ರಯ, ಒಪ್ಪಂದ ವ್ಯವಹಾರಗಳಲ್ಲಿ ಲಾಭ. ಕುಟುಂಬ ಸದಸ್ಯರಲ್ಲಿ ಒಮ್ಮತ. ವಿದೇಶಿ ವ್ಯವಹಾರಗಳಲ್ಲಿ ಮುನ್ನಡೆ. ವಾರಾಂತ್ಯ ಒತ್ತಡ. ಕಾರ್ಯಕಲಾಪಗಳಲ್ಲಿ ಅಡಚಣೆ. ಶುಭದಿನ: 14; ಗಣಪತಿ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ




ಶ್ರಮ ಕಡಿಮೆಯಾಗುವುದು. ಕೆಲಸ ಕಾರ್ಯಗಳು ಸಮಯಕ್ಕೆ ಸರಿಯಾಗಿ ಮುಗಿಯುವುದು. ವ್ಯಾಪಾರ ವಹಿವಾಟುಗಳಲ್ಲಿ ಸೂಕ್ತ ಲಾಭ ದೊರಕುವುದು. ಪ್ರೀತಿಪಾತ್ರರಿಂದ ಸಲಹೆ ದೊರಕುವುದು. ವಿರೋಧಿಗಳು ತಟಸ್ಥರಾಗುವರು. ಧೈವೀಕತೆಯಲ್ಲಿ ಆಸಕ್ತಿ ಹೆಚ್ಚಾಗುವುದು. ಸಂದೇಶಗಳು ಆತ್ಮಬಲ ಹೆಚ್ಚಿಸುವುದು. ಶುಭದಿನ: 14; ಗಣಪತಿ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ